<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರ: 111/24
ಸಿಡಬ್ಲ್ಯೂ- 6
ಪಿಡಬ್ಲ್ಯೂ- 8

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಪದ್ಮನಾಭ ಆಚಾರ್ಯ |
| ತಂದೆಯ ಹೆಸರು | : | ಸುಬ್ರಾಯ ಆಚಾರ್ಯ |
| ಪ್ರಾಯ | : | 60 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ, ಶ್ರೀ ದುರ್ಗಾ ಆಸ್ಪತ್ರೆ, ಹಾಲಾಡಿ |
| ವಾಸ | : | ಹಾಲಾಡಿ |

ದಿನಾಂಕ: **30- 06-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು ಸುಮಾರು 35 ವರ್ಷದಿಂದ ಶ್ರೀ ದುರ್ಗಾ ಆಸ್ಪತ್ರೆ, ಹಾಲಾಡಿಯಲ್ಲಿ ವೈದ್ಯಾಧಿಕಾರಿಯಾಗಿರುತ್ತೇನೆ. ಅದು ನನ್ನ ಸ್ವಂತ ಆಸ್ಪತ್ರೆಯಾಗಿರುತ್ತದೆ.

ದಿನಾಂಕ 12-10-2016 ರಂದು ಬೆಳಿಗ್ಗೆ 11 ಗಂಟೆಗೆ ಚಾಸಾ 2 ರವರು, 28 ವರ್ಷ ರಸ್ತೆ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗೆ ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರಿಗೆ ಚಿಕಿತ್ಸೆ ನೀಡಿರುತ್ತೇನೆ. ಅವರಿಗೆ ಎಡಬದಿಯ ಹಣೆಯ ಮೇಲೆ ಹಾಗೂ ಕಣ್ಣು ಹುಬ್ಬಿನ ಮೇಲ್ಭಾಗ ಊದಿಕೊಂಡ ಹಾಗೂ ತರಚಿದ ಗಾಯ, ಎಡಬದಿಯ ತಲೆಯ ಮೇಲೆ ಎಡಬದಿ ಮಣಿಕಂಟಿನ ಮೇಲೆ, ಎಡಬದಿಯ ಕೈಯ ಹಿಂಬದಿ ಮತ್ತು ಬೆರಳು, ಎಡಕಾಲಿನ ಮೇಲೆ ತರಚಿದ ಗಾಯಗಳಾಗಿರುತ್ತದೆ. ಅವಳನ್ನು ಒಳರೋಗಿಯಾಗಿ ದಾಖಲಿಸಿಕೊಂಡು 13-10-2016 ರಂದು ಬಿಡುಗಡೆಗೊಳಿಸಿರುತ್ತೇನೆ. ನನ್ನ ಅಭಿಪ್ರಾಯದಂತೆ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ ಎಂದು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 13(ಬಿ) ಎಂದು ಗುರುತಿಸಲಾಯಿತು.

ದಿನಾಂಕ 12-10-2016 ರಂದು ಬೆಳಿಗ್ಗೆ 11 ಗಂಟೆಗೆ ರಸ್ತೆ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ 1 ವರ್ಷ 3 ತಿಂಗಳ ಮಗು ಸಿಂಚನಾರವರು ಬಂದಿದ್ದು, ಅವರನ್ನು ಪರಿಶೀಲಿಸಿ ಎಡಬದಿಯ ತಲೆಯ ಮೇಲೆ ತುಂಬಾ ವಿಸ್ತರವಾದ ತರಚಿದ ಗಾಯ ಹಾಗೂ ಎಡಬದಿಯ ಮುಖ ಕೆನ್ನೆಭುಜ ಮತ್ತು ಮುಂತೋಳು ಮೇಲೆ ತರಚಿದ ಗಾಯಗಳಾಗಿದ್ದವು. ನನ್ನ

ಅಭಿಪ್ರಾಯದಂತೆ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ ಎಂದು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿದು, ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 14(ಎ) ಎಂದು ಗುರುತಿಸಲಾಯಿತು.

ಅದೇ ದಿನಾಂಕದಂದು ನರಸಿಂಹ ಎಂಬುವವರು ಅಪಘಾತದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರಿಗೂ ಎಡಬದಿಯ ತಲೆಯ ಕೆನ್ನೆಯ, ಎಡ ಭುಜ, ಎಡತೋಳು, ಮುಂತೋಳು, ಅಂಗೈ, ಬೆರಳ ತುದಿಗಳು, ಎಡ ಕಾಲು ಗಂಟು, ಎಡಕಾಲು, ಎಡ ಆ್ಯಂಕಲ್, ಎಡತೊಡೆ ಮತ್ತು ಬಲ ಹೆಬ್ಬೆರಳ ಮೇಲೆ ತರಚಿದ ಗಾಯಗಳು ಆಗಿದ್ದವು. ಎಡಮುಂತೋಳಿನಲ್ಲಿ ಊದಿಕೊಂಡ ಗಾಯಗಳಾಗಿದ್ದವು. ಎಕ್ಸ-ರೇ ನೋಡಿದಾಗ ಅದರ ಮೂಳೆ ಮುರಿತ ಖಚಿತವಾಗಿದ್ದವು. ಇನ್ನು ಒಂದು ಸಣ್ಣ ಗಾಯ ಬಲ ಪಕ್ಕೆಯಲ್ಲಿ ಒಂದು ಊದಿಕೊಂಡ ಗಾಯ ಆಗಿದ್ದವು. ಎರಡನೇ ಗಾಯ ತೀವ್ರ ಸ್ವರೂಪದ ಗಾಯ ಹಾಗೂ ಉಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ ಎಂದು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿದು, ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 15 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 15(ಎ) ಎಂದು ಗುರುತಿಸಲಾಯಿತು. 3 ಜನ ದಿನಾಂಕ 12-10-2016 ರಂದು ಆಸ್ಪತ್ರೆಗೆ ಬಂದಿದ್ದರು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಯು.ಎಸ್. ರವರಿಂದ</u>

1. ಗಾಯಾಳುಗಳು ಅಪಘಾತದ ಸಮಯ ಸುಮಾರು 10.45 ಗಂಟೆಗೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಚಾಸಾ 2 ಮತ್ತು ಸಿಂಚನಾರವರಿಗೆ ಸಾಮಾನ್ಯ ಸ್ವರೂಪದ ಗಾಯ ಎಂದರೆ ಸರಿ. ನರಸಿಂಹ ಅವರಿಗೆ ಒಂದು ಗಾಯ ತೀವ್ರ ಸ್ವರೂಪದ ಗಾಯ ಆಗಿತ್ತು ಎಂದರೆ ಸರಿ. ಯಾವ ರೀತಿ ಅಪಘಾತ ಆಗಿರುತ್ತದೆ ಎಂದು ನಾನು ಕೇಳಿರುವುದಿಲ್ಲ. ಒಂದು ಆಟೋದಲ್ಲಿ ಹೋಗುವಾಗ ಮತ್ತೊಂದು ವಾಹನ ನೋಡಿ ಸಡನ್ ಆಗಿ ಬ್ರೇಕ್ ಹಾಕಿದಾಗ ಈ ರೀತಿ ಗಾಯ ಆಗುವ ಸಂದರ್ಭ ಇರುತ್ತದೆ ಎಂದರೆ ಸಾಕ್ಷಿ ವಾಹನ ಎಡಭಾಗದಲ್ಲಿ ಪರ್ಟಿ ಆದರೆ ಮಾತ್ರ ಈ ರೀತಿ ಗಾಯ ಆಗುತ್ತದೆ ಎಂದು ನುಡಿಯುತ್ತಾರೆ. ಈ ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ.

2. ವಾಹನಗಳು ಸಡನ್ ಆಗಿ ಬ್ರೇಕ್ ಹಾಕಿದರೆ ಪ್ರಯಾಣಿಕರು ಮುಂದು ಹೋಗಿ ಬಿದ್ದು ನಿ.ಪಿ.13 ರಿಂದ 15 ರಲ್ಲಿ ನಮೂದಿಸಿದ ಗಾಯಗಳು ಆಗುತ್ತದೆ ಎಂದರೆ ಸರಿಯಲ್ಲ. ಒಬ್ಬ ರಿಕ್ಷಾ ಚಾಲಕನ ಅಜಾಗರುಕತೆಯಿಂದ ಈ ರೀತಿ ಗಾಯ ಆಗುವ ಸಂಭವ ಇದೆ ಎಂದರೆ ಸರಿ. ಗಾಯದ ವಯಸ್ಸು ಗಳನ್ನು ನಾನು ನಿ.ಪಿ. 13 ರಿಂದ 15 ರಲ್ಲಿ ನಮೂದಿಸಿರುತ್ತೇನೆ. ನಿ.ಪಿ.13 ರಿಂದ 15 ರಲ್ಲಿ ಬರುವ ಸಮಯಕ್ಕಿಂತ ಕೆಲವು ನಿಮಿಷಗಳ ಮುಂಚೆ ಎಂದು ನಮೂದಿಸಿರುತ್ತೇನೆ. ಇಬ್ಬರಿಗೆ ಸಾಮಾನ್ಯ

ಸ್ವರೂಪದ ಗಾಯ ಹಾಗೂ ಒಬ್ಬರಿಗೆ ತೀವ್ರ ಸ್ವರೂಪದ ಗಾಯ ಆಗಿದ್ದು ಅವರನ್ನು ಸೇರಿಸಿಕೊಳ್ಳುವ ಅಗತ್ಯತೆ ಇಲ್ಲದಿದ್ದರೂ ಅವರನ್ನು ಆಸ್ಪತ್ರೆಗೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ